ಅ) ಬೆಳಗಾಂವ ಜಿಲ್ಲೆ, ಸವದತ್ತಿ ತಾಲ್ಲೂಕಿನ ನತ್ತಿಗೇರಿ ಬಸ್ ನಿಲ್ದಾಣದ ಕಾಮಗಾರಿ ಕೆಲಸಕ್ಕಾಗಿ 2004–05ನೇ ಸಾಲಿನಲ್ಲಿ ಟೆಂಡರ್ ಕರೆದು ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿದ್ದ ದರಗಳು ತುಂಬಾ ದುಬಾರಿಯಾಗಿದ್ದರಿಂದ ಟೆಂಡರ್‌ನ್ನು ರದ್ದುಪಡಿಸಲಾಗಿತ್ತು ನಂಸ್ಥೆಯ ಆರ್ಥಿಕ ಮುಗ್ಗಟ್ಟಿನಿಂದ ಬಸ್ ನಿಲ್ದಾಣದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿರುವುದಿಲ್ಲ

ಆ) ನತ್ತಿಗೇರಿ ಬಸ್ ನಿಲ್ದಾಣ ನಿರ್ಮಾಣದ ಕಾಮಗಾರಿ ಕೆಲಸಕ್ಕಾಗಿ 2007–08ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ರೂ 20 00 ಲಕ್ಷಗಳ ಪ್ರಾವದಾನ ಮಾಡಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು

913(1079) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾದ ಬಂದರು ಹೂಳು ತುಂಬಕೊಂಡು ಅನುವಯುಕ್ತ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಬಂದರನ್ನು ಅಭಿವೃದ್ಧಿಪಡಿಸಿ, ವಾಣಿಜ್ಯ ಹಾಗೂ ಮೀನುಗಾರಿಕೆಗೆ ಚಾಲನೆ ಬಂದಿದೆಯೇ,

ಇ) ಇದನ್ನು ಅಭಿವೃದ್ದಿಪಡಿಸಲು ಕೈಗೊಳ್ಳಲಾಗುವ ಕ್ರಮಗಳೇನು,

ಈ) ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) 1987ನೇ ಸಾಲಿನಿಂದ ಸರ್ಕಾರದ ಆದೇಶ ಸಂಖ್ಯ ಪಿಡಬ್ಲ್ಯೂಡಿ 22 ಪಿಎನ್‌ಪಿ 87ರಂತೆ ಈ ಬಂದರನ್ನು Indian Ports Act 1908ರ ವ್ಯಾಪ್ತಿಯಿಂದ ಹೊರತುಪಡಿಸಲಾಗಿರುವುದರಿಂದ ಈ ಬಂದರನ್ನು ವಾಣಿಜ್ಯ ಬಂದರನ್ನಾಗಿ ಅಭಿವೃದ್ದಿಪಡಿಸುವ ಪ್ರಶ್ನೆ ಉದ್ಭವಿಸಿರುವುದಿಲ್ಲ

ಕುಮಟಾ ಹೆಡ್ ಬಂದರು ಅಥವಾ ಕುಮಟಾ ಆಳ್ವೆದಂಡೆ ಅಥವಾ ಕುಮಟಾ ವನ್ನವಳ್ಳಿಯಲ್ಲಿ ಯಾವುದಾದರೊಂದು ಪ್ರದೇಶದಲ್ಲಿ ಮೀನುಗಾರಿಕೆ ಬಂದರೊಂದನ್ನು ಅಭಿವೃದ್ಧಿಪಡಿಸುವ ಬಗ್ಗೆ ಮೀನುಗಾರಿಕೆ ಇಲಾಖೆಯು ಪರಿಶೀಲಿಸುತ್ತಿದೆ

ಇ) ಮೀನುಗಾರಿಕಾ ಇಲಾಖೆಯ ಕೋರಿಕೆಯಂತೆ ಈ ವೈಕಿ ಕುಮಟಾ ವನ್ನಳ್ಳಿಯಲ್ಲಿ ಮಿನುಗಾರಿಕಾ ಬಂದರನ್ನು ಅಭಿವೃದ್ಧಿಪಡಿಸುವ ಬಗ್ಗೆ Feasibility

ಅಧ್ಯಯನ ವರದಿ ನೀಡಲು National Institute of Technology, Karnataka (NITK) ಸುರತ್ಕಲ್ ಇವರನ್ನು ಕೋರಲಾಗಿದೆ

ಈ) Feasibility ಅಧ್ಯಯನ ವರದಿ ಬಂದ ನಂತರ ಪರಿಶೀಲಿಸಲಾಗುವುದು

914(1080) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ವಿಧಾನ ಸಭಾ ಕ್ಷೇತ್ರದ ಅರಬ್ಬೀ ಸಮುದ್ರ ದಂಡೆಯ ಭೂ ಪ್ರದೇಶವು ಪ್ರತಿ ವರ್ಷ ಮಳೆಗಾಲದಲ್ಲಿ ಸಮುದ್ರ ಕೊರೆತದ ಹಾನಿ ಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಅವಾರ ಪ್ರಮಾಣದ ಭೂ ಪ್ರದೇಶ ಕೊರೆತವನ್ನು ತಡೆಗಟ್ಟಲು ಅಗತ್ಯ ಇರುವ ಎಲ್ಲಾ ಕಡೆಗಳಲ್ಲಿ ತಡೆಗೋಡೆ ನಿರ್ಮಾಣಕ್ಕೆ ವಿಸ್ತೃತ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗುವುದು,

ಇ) ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ಕುಮಟಾ ವಿಧಾನ ಸಭಾ ಕ್ಷೇತ್ರದ 43 ಕಿ ಮೀ ಕರಾವಳಿ ತೀರದ ಪೈಕಿ ಸುಮಾರು 31 ಕಿ ಮೀ ಕರಾವಳಿ ಪ್ರದೇಶ ಸಮುದ್ರದ ಕೊರೆತಕ್ಕೆ ಒಳಗಾಗುತ್ತಿದೆ ಈ ಪೈಕಿ 9 ಕಿ ಮೀ ಪ್ರದೇಶದಲ್ಲಿ ರೂ 41 00 ಕೋಟಿ ಅಂದಾಜು ವೆಚ್ಚದಲ್ಲಿ Central Water & Power Research Station (C W P R S), Pune ಇವರು ನೀಡಿರುವ ವಿನ್ಯಾಸದಂತೆ ಕಲ್ಲಿನಿಂದ ತಡೆಗೋಡೆಯನ್ನು ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆಯಡಿ (National Coastal Protection Project) ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ

ಇ) ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣೆ ಯೋಜನೆಯು (National Coastal Protection Project) ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಕೇಂದ್ರ ಸರ್ಕಾರವು ಮಂಜೂರು ನೀಡಿದ ಕೂಡಲೇ ಕಾಮಗಾರಿಯನ್ನು ಮಾಡಿ ಕೈಗೊಳ್ಳಲಾಗುವುದು